ಸಹ ಕಲಿತುಕೊಂಡಿದ್ದಳು. ಅವಕಾಶ ಸಿಕ್ಕಾಗಲೆಲ್ಲಾ ತನ್ನ ಗಂಡನ ಜೊತೆಗೋ ಇಲ್ಲವೇ ಬೇರೆ ಗಂಡಸರೊಟ್ಟಿಗೋ ಯಾವುದೇ ಹಿಂಜರಿಕೆಯಿಲ್ಲದೆ ವಯ್ಯಾರದಿಂದ ಕುಣಿಯುತ್ತಿದ್ದಳು.

ಇದ್ದಕ್ಕಿದ್ದಂತೆ ಮಿಸೆಸ್ ಮಲೀಕ್‌ಳಿಗೆ ವಾಸ್ತುಶಿಲ್ಪಿಯು ನಿರ್ಮಿಸಿದ ಪ್ರತಿಮೆಯ ಚಿತ್ರ ಅವಳ ಕಣ್ಮುಂದೆ ಹಾದು ಹೋಯಿತು. ಒಂದು ಕ್ಷಣ 'ಅದೇನಾದರೂ ತನ್ನ ಸೊಸೆಯದಾಗಿರಬಹುದೆ?' ಎಂಬ ಅನುಮಾನ ಅವಳನ್ನು ಕಾಡಿತು. ಅದ್ಹೇಗೆ ಸಾಧ್ಯ? ಮನೆ ಕಟ್ಟಿಸುವಾಗ ಅವಳ ಸೊಸೆ ಇಲ್ಲಿಗಿನ್ನೂ ಬಂದಿರಲೇ ಇಲ್ಲ! ಆದರೆ ಚಿತ್ರದಲ್ಲಿನ ಪ್ರತಿಮೆಯು ಮರೂನ್ ಬಣ್ಣದ ಸೀರೆಯನ್ನು ಉಟ್ಟಂತೆಯೇ ಅವಳ ಸೊಸೆ ಕೂಡಾ ಮರೂನ್ ಸೀರೆಯನ್ನೇ ಉಟ್ಟಿದ್ದಳು. ಹೌದು, ಖಂಡಿತ ಅದು ಮರೂನ್ ಸೀರೆಯೇ! ಆದರೆ ಮಿಸೆಸ್ ಮಲೀಕ್‌ಳಿಗೆ ಅದೇಕೋ ಮರೂನ್ ಬಣ್ಣವನ್ನು ಕಂಡರೆ ಆಗುತ್ತಿರಲಿಲ್ಲ. ಅದು ಕಣ್ಣಿಗೆ ಹೊಡೆಯುತ್ತದೆನ್ನುವದು ಅವಳ ವಾದವಾಗಿತ್ತು. ಅದೇನಿದ್ದರೂ ತನ್ನ ಸೊಸೆಯಂತಹವರಿಗೆ ಮಾತ್ರ ಸರಿ ಎನ್ನುವದು ಅವಳ ಅಭಿಪ್ರಾಯವಾಗಿತ್ತು!

'ಅವಳು ತನಗೆ ಬೇಕಾದರೆ ಮರೂನ್ ಸೀರೆಗಳನ್ನೇ ಉಡಲಿ. ಲಿಪ್‌ಸ್ಟಿಕ್ ಹಾಕಿಕೊಳ್ಳಲಿ. ನಂಗೇನೂ ಬೇಜಾರಿಲ್ಲ' ತನ್ನಷ್ಟಕ್ಕೆ ತಾನೆ ಹೇಳಿಕೊಂಡಳು ಮಿಸೆಸ್ ಮಲೀಕ್. 'ಆದರೆ ನನ್ನಷ್ಟೇ ಅವಳೂ ಕಷ್ಟಪಟ್ಟು ದುಡಿಯಬೇಕು. ಮನೆಯ ಪ್ರತಿಯೊಂದು ಇಟ್ಟಿಗೆಯನ್ನು ನಾನೇ ಸ್ವತಃ ನಿಂತು ಇಡಿಸಿದ್ದೇನೆ. ಬಿಸಿಲು, ಮಳೆ ಎನ್ನದೇ ಬೆಳಗಿನ ಜಾವದಿಂದ ಸಂಜೆಗತ್ತಲವರೆಗೂ ನಿಂತು ಕಟ್ಟಡದ ಮೇಲ್ವಿಚಾರಣೆಯನ್ನು ನಡೆಸಿದ್ದೇನೆ. ಪ್ಲಾಸ್ಟರ್ ಗೋಡೆಗಳಿಗೆ ನೀರು ಹಾಕಿದ್ದೇನೆ. ಅಗತ್ಯ ಬಿದ್ದಾಗ ನಾನೇ ಸ್ವತಃ ಗಾರೆ ಹಾಕಿದ್ದೇನೆ. ಮೇಸ್ತ್ರಿಗಳಿಗೆ ಸಹಾಯ ಮಾಡಿದ್ದೇನೆ. ನನ್ನಷ್ಟಲ್ಲವಾದರೂ ನನ್ನ ಅರ್ಧದಷ್ಟಾದರೂ ಮನೆಯ ಏಳ್ಗೆಗಾಗಿ ಆಕೆ ಶ್ರಮಿಸಲೇಬೇಕು.'

ಅವರು ಮನೆ ತಲುಪಿದರು. ಮಿಸೆಸ್ ಮಲೀಕ್‌ಳ ಮಗ ಕಾರನ್ನು ನೇರವಾಗಿ ಪೋರ್ಟಿಕೋದಲ್ಲಿ ತಂದು ನಿಲ್ಲಿಸಿದ. ತಕ್ಷಣ ಅವಳ ಸೊಸೆ ಕಾರಿನಿಂದ ಜಿಗಿದು ನೇರವಾಗಿ ವರಾಂಡಕ್ಕೆ ಓಡಿಹೋದಳು. ಅಲ್ಲಿದ್ದ ಶಿಲ್ಪಾಕೃತಿಯನ್ನು ಆಸಕ್ತಿಯಿಂದ ಗಮನಿಸಿಸುತ್ತಾ ಆ ಶಿಲ್ಪಾಕೃತಿಯು ಯಾವ ಭಂಗಿಯಲ್ಲಿ ನಿಂತಿತ್ತೋ ಅದೇ ಭಂಗಿಯಲ್ಲಿ ಮತ್ತೆ ಮತ್ತೆ ನಿಲ್ಲುವ ಪ್ರಯತ್ನ ಮಾಡಿದಳು. ಮಿಸೆಸ್ ಮಲೀಕ್‌ಳ ಎದೆಗೆ ಚೂರಿ ಹಾಕಿದಂತಾಯಿತು. ವಾಸ್ತುಶಿಲ್ಪಿಯೂ ಅವಳನ್ನು ನೋಡಿ ನಕ್ಕಂತೆ ಭಾಸವಾಯಿತು.

ವರಾಂಡದಲ್ಲಿದ್ದ ಪ್ರತಿಮೆಗೆ ಎದುರಾಗಿ ನಿಂತು ಅದರಂತೆಯೇ ತನ್ನ ನವಿರಾದ ಕೂದಲನ್ನು ತನ್ನ ಮರೂನ್ ಸೀರೆಯ ಸೆರಗಿನಲ್ಲಿ ಅಡಗಿಸುತ್ತಾ, ಮತ್ತೆ ಮತ್ತೆ ಅದನ್ನೇ ಅನುಕರಿಸುತ್ತಾ ಮಿಸೆಸ್ ಮಲೀಕ್‌ಳ ಸೊಸೆ ಆಳುಗಳಿಗೆ ಬಾಡಿಗೆ ಕಾರಿನಲ್ಲಿ ತಂದಿದ್ದ ಲಗೇಜ್‌ನ್ನು ತೆಗೆದಿರಿಸಲು ಹೇಳಿದಳು.

ಕಾರಿನಿಂದ ಲಗೇಜ್‌ನ್ನು ತೆಗೆದಿರಿಸಲಾಯಿತು. ಟ್ಯಾಕ್ಸಿ ಡ್ರೈವರನಿಗೆ ಬಾಡಿಗೆಯನ್ನು ಕೊಟ್ಟು ಕಳಿಸಿದರು. ಮಿಸೆಸ್ ಮಲೀಕ್ ಹಿಂದಿನ ಸೀಟಿನಲ್ಲಿ ಕುಳಿತೇ ಇದ್ದಳು. ಒಂದು ಕ್ಷಣ ಆಕೆಗೆ ತಾನು ಮುಳುಗಿಹೋಗುತ್ತಿರುವೆನೇನೋ ಎನ್ನುವಂತೆ ಭಾಸವಾಯಿತು.

ಅವಳ ಮಗ ಮನೆಯೊಳಗೆ ಹೋದನು. ಅವಳ ಸೊಸೆ ಅವನನ್ನು ಹಿಂಬಾಲಿಸಿದಳು. ಅವರು ಒಂದಾದ ಮೇಲೊಂದು ಲೈಟ್‌ಗಳನ್ನು ಹಾಕುತ್ತಾ ಬಂದರು. ಎಲ್ಲ ಕೋಣೆಗಳೂ ವಿದ್ಯುದೀಪಗಳಿಂದ ಬೆಳಗಿ ಇಡಿ ಮನೆ ಝುಗಮಗಿಸತೊಡಗಿತು. ಮಿಸೆಸ್ ಮಲೀಕ್ ಮನೆಯ ಸೌಂದರ್ಯವನ್ನು ನೋಡಿ ಆಶ್ಚರ್ಯಪಟ್ಟಳು. ಅವಳಿನ್ನೂ ಕಾರಿನ ಹಿಂದಿನ ಸೀಟಿನಲ್ಲಿಯೇ ಕುಳಿತಿದ್ದಳು. ಉದ್ವೇಗದಲ್ಲಿದ್ದ ಅವಳ ಮಗನಿಗಾಗಲಿ, ಸೊಸೆಗಾಗಲಿ ಕಾರಿನ ಹಿಂದಿನ ಬಾಗಿಲನ್ನು ತೆಗೆಯುವುದು ನೆನಪಾಗಿರಲಿಲ್ಲ. ಮಿಸೆಸ್ ಮಲೀಕ್‌ಳಿಗೆ ತಾನು ಮರೆತು ಹೋದ ಲಗೇಜ್‌ನಂತಾಗಿರುವನೇನೋ ಎಂಬಂತೆ ಭಾಸವಾಯಿತು.

ಒಂದು ಗಂಟೆ ಸರಿಯಿತು. ಮತ್ತೊಂದು ಗಂಟೆ ಕಳೆಯಿತು. ಇದ್ದಕ್ಕಿದ್ದಂತೆ ಮಿಸೆಸ್ ಮಲೀಕ್‌ಳ ಮಗನಿಗೆ ತನ್ನ ತಾಯಿಯ ನೆನಪಾಯಿತು. ತಕ್ಷಣ ಪೋರ್ಟಿಕೋಕ್ಕೆ ಹೋಗಿ ಕಾರಿನ ಬಾಗಿಲು ತೆಗೆದ.